ಟೆಂಡರ್‌ಗೆ ಅನುದಾನ ಹೆಚ್ಚಿಸಬೇಕೆಂದು ಕೇಳಿದ್ದಾರೆ. ಏಕೆಂದರೆ, ಅಲ್ಲಿ ಮುಂಚೆಯೇ ತೋರಿಸಿದ್ದ ನಿವೇಶನ ಇತ್ತು. ಆ ಕಂಟ್ರಾಕ್ಟರ್‌ಗೆ ತಕ್ಷಣದಲ್ಲೇ ಕೆಲಸ ಪ್ರಾರಂಭಿಸಲು ಆದೇಶಿಸಬೇಕು. ಇಲ್ಲದಿದ್ದಲ್ಲಿ, ಕೆಲಸ ಮಾಡಲು ಮರು ಟೆಂಡರ್ ಕರೆಯಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಪ್ರತಾಪಗೌಡ ಪಾಟೀಲರು ಮಸ್ಕಿ ಮಹಿಳಾ ಪದವಿಪೂರ್ವ ಕಾಲೇಜು ಕಟ್ಟಡವನ್ನು ಮಂಜೂರು ಮಾಡಿಕೊಟ್ಟಿದ್ದರೂ ಅಲ್ಲಿ ಕಟ್ಟಡ ಕಟ್ಟುವುದಕ್ಕೆ ವಿಳಂಬವಾಗುತ್ತಿರುವ ಬಗ್ಗೆ ಅಲ್ಲಿನ ಗುತ್ತಿಗೆದಾರರ ಮತ್ತು ಸ್ಥಳದ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ನಾವು ಈಗಾಗಲೇ ನಬಾರ್ಡ್ ಯೋಜನೆಯ ಆರ್‌ಐಡಿಎಫ್–12ರಡಿಯಲ್ಲಿ ಟೆಂಡರ್ ಕರೆದು ಕೆಲಸ ಕೊಟ್ಟು ಸ್ಥಳದ ತೊಡಕು ಇದ್ದ ಕಾರಣದಿಂದಾಗಿ ಕಟ್ಟಡದ ಕೆಲಸ ನಿರ್ಮಾಣವಾಗಿರಲಿಲ್ಲ. ಆದರೆ, ನಾನು ಈಗಾಗಲೇ ನಮ್ಮ ಅಧಿಕಾರಿಗಳೊಂದಿಗೆ ಸವಿಸ್ತಾರವಾಗಿ ಮಾತನಾಡಿ ಇದಕ್ಕೆ ಅಲ್ಲಿಯ ಪ್ರೌಢಶಾಲಾ ಕಟ್ಟಡದ ಜಾಗ ಏನಿದೆ, ಆ ಸ್ಥಳದಲ್ಲೇ ಕಟ್ಟಬೇಕೆಂದು ಏನು ಗುರುತು ಮಾಡಿದ್ದಾರೆ, ಅಲ್ಲಿ ಕಟ್ಟುವುದಕ್ಕೆ ಬೇಕಾಗಿರತಕ್ಕಂಥ ಕ್ರಮ ತೆಗೆದುಕೊಳ್ಳುವುದಕ್ಕೆ ಸೂಚಿಸಿದ್ದೇನೆ ಮತ್ತು ಅಲ್ಲಿ ಸ್ಥಳೀಯರ ಜೊತೆಯಲ್ಲಿ ಮಾನ್ಯ ಶಾಸಕರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಹೈಸ್ಕೂಲು ಜಾಗದಲ್ಲಿ ಕಟ್ಟಡ ಕಟ್ಟುವುದಕ್ಕೆ ಎಸ್‌ಡಿಎಂಸಿಯವರ ಸಹಕಾರ ಬೇಕೆಂದು ಕೇಳುತ್ತಿದ್ದೇವೆ. ಏಕೆಂದರೆ, ಇದಕ್ಕೆ ಅವರ ಒಪ್ಪಿಗೆ ಬೇಕಾಗುತ್ತದೆ. ಆದರೆ, ಅವರ ಒಪ್ಪಿಗೆ ಪಡೆದು, ಸೌಹಾರ್ದಯುತ ಹಿನ್ನೆಲೆಯಲ್ಲಿ, ವಿಶ್ವಾಸದಲ್ಲಿ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕಾಗಿದೆ. ಹಾಗಾಗಿ, ನಾನು ಮತ್ತು ನಮ್ಮ ಪ್ರತಾಪಗೌಡ ಪಾಟೀಲರು ಈ ವಿಷಯದಲ್ಲಿ ಸ್ಥಳೀಯವಾಗಿ ಗುತ್ತಿಗೆದಾರರು ಇದ್ದರೆ, ಏನು ತೊಂದರೆ ಇದೆ, ಸರ್ಕಾರದ ನಿಯಮದಂತೆ ಅವರು ಕಟ್ಟಡವನ್ನು ಕಟ್ಟಬೇಕಾಗುತ್ತದೆ. ಆದರೆ, ಎಸ್‌ಡಿಎಂಸಿಯವರ ಒಪ್ಪಿಗೆ ಪಡೆದು ಅದೇ ಸ್ಥಳದಲ್ಲಿ ಕಟ್ಟಡ ಕಟ್ಟುವುದಕ್ಕೆ ಅಗತ್ಯವಿರುವ ಕ್ರಮ ತೆಗೆದುಕೊಳ್ಳುತ್ತೇವೆ.

ಜೆ.ಓ.ಸಿ. ಶಿಕ್ಷಣದ ಉಪಕರಣಗಳನ್ನು ಒದಗಿಸುವುದು

34(148) **ಶ್ರೀ ಶ್ರೀನಿವಾಸ ಎಂ. (ಮಂಡ್ಯ):–** ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿನ ಪದವಿ ಪೂರ್ವ ಶಿಕ್ಷಣದಲ್ಲಿನ ಜೆ.ಓ.ಸಿ. ಕೋರ್ಸುಗಳು

ಎಷ್ಟು ಮತ್ತು ಎಷ್ಟು ಕಾಲೇಜುಗಳಲ್ಲಿ ಈ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ;

(ಆ) ಮಂಡ್ಯದಲ್ಲಿರುವ ಜೆ.ಓ.ಸಿ. ಕಾಲೇಜಿನಲ್ಲಿ ಪ್ರಿಂಟಿಂಗ್ ಟೆಕ್ನಾಲಜಿ ಕೋರ್ಸ್‌ಗೆ ಸಂಬಂಧಪಟ್ಟಂತೆ ಒದಗಿಸಿರುವ ಉಪಕರಣಗಳ ವಿವರಗಳೇನು ; ಆಧುನಿಕ ಉಪಕರಣಗಳನ್ನು ಒದಗಿಸದೇ ಇರಲು ಕಾರಣಗಳೇನು ;

(ಇ) ಆಧುನಿಕ, ಸುಸಜ್ಜಿತ ಪ್ರಿಂಟಿಂಗ್ ಟೆಕ್ನಾಲಜಿ ಕೋರ್ಸ್‌ನ ತಂತ್ರಜ್ಞಾನ ಮತ್ತು ಸೌಲಭ್ಯಗಳನ್ನು ವಿದ್ಯಾರ್ಥಿಗಳು ಪಡೆಯಲು ಸರ್ಕಾರದ ಕ್ರಮಗಳೇನು ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :–

(ಅ) 919 552 ಕಾಲೇಜುಗಳಲ್ಲಿ ಈ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

(ಆ) ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು, ಕಲ್ಲುಕಟ್ಟಡ, ಮಂಡ್ಯ, ಇಲ್ಲಿ 1988–89ನೇ ಸಾಲಿನಲ್ಲಿ ಪ್ರಾರಂಭವಾದ ಪ್ರಿಂಟಿಂಗ್ ಟೆಕ್ನಾಲಜಿ ಕೋರ್ಸ್‌ಗೆ ಪ್ಲೇಟನ್ ಪ್ರಿಂಟಿಂಗ್, ಪಿನ್ನಿಂಗ್ ಯಂತ್ರಗಳು, ಹಾರ್ಡ್‌ಪ್ರೆಸ್, ಪ್ರೂಫ್ ಪ್ರೆಸ್, ಕೇಸರ್ ಟೈಪ್ಸ್ ಉಪಕರಣಗಳು ಒದಗಿಸಿದ್ದು. ಇತ್ತೀಚೆಗೆ ಆಧುನಿಕ ಉಪಕರಣಗಳಾದ ಬೈಂಡಿಂಗ್ ವೆಬಲ್, ಸ್ಕ್ರೀನ್ ಪ್ರಿಂಟಿಂಗ್ ಯಂತ್ರ ಮತ್ತು ಬೈಂಡಿಂಗ್ ಯಂತ್ರಗಳನ್ನು ಒದಗಿಸಲಾಗಿದೆ.

(ಇ) 2007–08ನೇ ಸಾಲಿನಲ್ಲಿ ಆಧುನಿಕ ಉಪಕರಣಗಳ ಖರೀದಿಗಾಗಿ ಮೂಲಭೂತ ಸೌಕರ್ಯದ ಅನುದಾನದಲ್ಲಿ ಬಿಡುಗಡೆಯಾದ ರೂ. 45,000/–ಗಳಲ್ಲಿ ಪಠ್ಯಕ್ರಮಕ್ಕೆ ಅನುಸಾರವಾಗಿ ಬೈಂಡಿಂಗ್ ವೆಬಲ್–ಸ್ಕ್ರೀನ್ ಪ್ರಿಂಟಿಂಗ್ ಯಂತ್ರ ಮತ್ತು ಬೈಂಡಿಂಗ್ ಯಂತ್ರಗಳನ್ನು ಒದಗಿಸಲಾಗಿದೆ.

ಶ್ರೀ ಎಂ. ಶ್ರೀನಿವಾಸ್ : ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಮೊದಲನೇ ಪ್ರಶ್ನೆಗೆ ಉತ್ತರವಾಗಿ ಬರೀ ನಂಬರ್ ಕೊಟ್ಟಿದ್ದಾರೆ. ಯಾವ್ಯಾವ ಕೋರ್ಸುಗಳು ಇವೆ ಎಂಬುದರ ಬಗ್ಗೆ ದಯಮಾಡಿ ಲಿಖಿತವಾಗಿ ಪಟ್ಟಿ ಒದಗಿಸಿಕೊಡಬೇಕು. ಜೊತೆಗೆ, ಕೇಳಿರುವ ಎರಡನೇ ಪ್ರಶ್ನೆಯನ್ನೇ ದಿನಾಂಕ 12.7.06ರಲ್ಲಿ ಪ್ರಶ್ನೆ ಸಂಖ್ಯೆ 1540ಯನ್ನು ಅಂದಿನ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಗೆ ಕೇಳಿದ್ದೆ. ಅವರು ಉತ್ತರವಾಗಿ ಹೊಸ ಟೆಕ್ನಾಲಜಿ ಒದಗಿಸಿಕೊಡುತ್ತೇವೆಂದು ಹೇಳಿದ್ದರು. ಸುಮಾರು 200 ಮಕ್ಕಳು ಅಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಅಲ್ಲಿ ಯಾವುದೇ ಒಂದು ಟೆಕ್ನಾಲಜಿಗೆ ಸಂಬಂಧಪಟ್ಟಂತೆ ಉಪಕರಣಗಳಿಲ್ಲದೆ ಪ್ರೈವೇಟ್‌ನಲ್ಲಿರುವ ಪ್ರಿಂಟಿಂಗ್ ಟಕ್ನಾಲಜಿ

ಕೋರ್ಸ್‌ಗೆ ಹೋಗುತ್ತಿದ್ದಾರೆ. ಇದರ ಬಗ್ಗೆ ಅನೇಕ ಸಾರಿ ಮನವಿಯನ್ನು ಮಾಡಿದರೂ ಸಂಬಂಧಪಟ್ಟ ಇಲಾಖೆಯವರು ಅದಕ್ಕೆ ಸ್ಪಂದಿಸದೇ ಇರುವುದಕ್ಕೆ ಕಾರಣವೇನೆಂದು ಕೇಳುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಇದು ಮೇಲ್ನೋಟಕ್ಕೆ ಮಂಡ್ಯದಲ್ಲಿರುವಂಥ ಜಿ.ಓ.ಸಿ. ಕಾಲೇಜಿನಲ್ಲಿರುವಂಥ ಪ್ರಿಂಟಿಂಗ್ ಪ್ರೆಸ್‌ನ ಒಂದು ವಿಷಯವೆಂದು ಕಂಡು ಬಂದರೂ ಸಹ, ಇದು ಒಟ್ಟಾರೆ ರಾಜ್ಯದ ಜೆ.ಓ.ಸಿ. ಕೋರ್ಸ್‌ಗಳು ತಮ್ಮ ಸ್ಥಿತಿ – ಗತಿಗಳು ಹೇಗಿದೆಯೆನ್ನುವುದನ್ನು ಪ್ರತಿಫಲಿಸುತ್ತಾ ಇವೆ. ತಾವು ಒಟ್ಟು ಕೋರ್ಸ್‌ಗಳ ವಿವರಗಳನ್ನು ಕೇಳಿದ್ದೀರಿ. ಆ ಮಾಹಿತಿಯನ್ನು ಕೊಟ್ಟಿದ್ದೇವೆ, ಅದೇ ರೀತಿಯಲ್ಲಿ ಕಾಲೇಜುಗಳ ವಿವರಗಳನ್ನು ಕೇಳಿದ್ದೀರಿ, ಅದನ್ನು ಕೊಟ್ಟಿದ್ದೇವೆ. ತಾವು ಇನ್ನು ಹೆಚ್ಚಿನ ಮಾಹಿತಿಗಳನ್ನು ಕೇಳಿದ್ದೀರಿ, ಅದನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮಂಡ್ಯದ ಜೆ.ಓ.ಸಿ. ಕಾಲೇಜನಲ್ಲಿ ಪ್ರಿಂಟಿಂಗ್ ಟೆಕ್ನಾಲಜಿ ಕೋರ್ಸ್ ಬಗ್ಗೆ ಆಧುನಿಕ ಉಪಕರಣಗಳನ್ನು ಕೊಡಬೇಕೆಂದು ಅವರು ಅನೇಕ ವರ್ಷಗಳಿಂದ ಕೇಳುತ್ತಿದ್ದಾರೆ. ಇದು ಬಹಳ ಯೋಗ್ಯವಾಗಿದೆ. ಏಕೆಂದರೆ ಇನ್ನು ನಾವು ಮೊಳೆ ಜೋಡಿಸುವಂಥಾ ಸ್ಥಿತಿಯಲ್ಲಿ ಇಲ್ಲ, ದಿನನಿತ್ಯ ತಾಂತ್ರಿಕತೆ, ವಿಜ್ಞಾನಗಳಲ್ಲಿ ಬದಲಾಗುತ್ತಿರುವ ಕಾರಣಗಳಿಂದಾಗಿ ನಾವು ಈ ಕೋರ್ಸ್‌ಗಳನ್ನು update ಮಾಡಿಕೊಳ್ಳಬೇಕಾಗುತ್ತದೆ. ರಾಜ್ಯದಲ್ಲಿ ಜೆ.ಓ.ಸಿ. ವಿಭಾಗ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಪಟ್ಟಂಥ ವಿಭಾಗವೆಂದು ನಮ್ಮೆಲ್ಲರ ಅನುಭವದಲ್ಲಿರುವಂಥ ಸತ್ಯ, ಹಾಗಾಗಿ ನಾವು ಈ ವೃತ್ತಿಪರ ಶಿಕ್ಷಣ ಕೋರ್ಸ್‌ಗಳನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ 29 panel ಗಳನ್ನು ರಚನೆ ಮಾಡಿ ಈ ಕೋರ್ಸ್‌ಗಳ ಉಪಯುಕ್ತತೆ ನಮ್ಮ ಯುವಕರಿಗೆ ಹೆಚ್ಚಾಗಬೇಕು, ಏಕೆಂದರೆ ಯುವಕರು ಸ್ವಾವಲಂಬಿ ಜೀವನವನ್ನು ನಡೆಸುವುದಕ್ಕೆ ಅವರಿಗೆ ಶಕ್ತಿ ಬರಬೇಕು. ಆ ಹಿನ್ನೆಲೆಯಲ್ಲಿ ಈ 29 panel ಗಳನ್ನು ರಚನೆ ಮಾಡಿದ್ದೇವೆ. ಆ panel ಗಳು ಮುಂದಿನ ತಿಂಗಳಲ್ಲಿ ವರದಿಯನ್ನು ಕೊಡುವುದಿದೆ. ಆ ವರದಿಯ ಆಧಾರದ ಮೇಲೆ ವೃತ್ತಿಪರ ಶಿಕ್ಷಣ ಕೋರ್ಸ್‌ಗಳಲ್ಲಿ ಅಗತ್ಯವಾದ ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಮಾನ್ಯ ಮುಖ್ಯಮಂತ್ರಿಯವರು ಮೊನ್ನೆ ಬಜೆಟ್‌ನಲ್ಲಿ ವೃತ್ತಿಪರ ಶಿಕ್ಷಣ ಕೋರ್ಸ್‌ಗಳನ್ನು ಇನ್ನು ಹೆಚ್ಚು ಬಲಪಡಿಸುವುದಕ್ಕೆ, ನಮ್ಮ ಯುವಕರಿಗೆ ಸ್ವಯಂ ಉದ್ಯೋಗಾವಕಾಶಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ Employment & Training ವಿಭಾಗದ ಜೊತೆಯಲ್ಲಿ ಈ ಇಲಾಖೆಯನ್ನು ಸೇರಿಸಬೇಕೆನ್ನುವ ಪ್ರಸ್ತಾವನೆಯನ್ನು ಮಾಡಿದ್ದಾರೆ, ಹಾಗಾಗಿ ಸರ್ಕಾರ

ಇದರ ಬಗ್ಗೆ ಹೆಚ್ಚಿನ ಗಮನ ಕೊಟ್ಟು ಯುವಕರಿಗೆ ಉದ್ಯೋಗವಕಾಶಗಳು ಹೆಚ್ಚೆಚ್ಚು ಸೃಷ್ಟಿಯಾಗುವುದಕ್ಕೆ ನಾವು ಗಮನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೆ, DTP Model Computer ಕೊಡಿಯೆಂದು ಕೇಳಿದ್ದೆವು, computer ಬಗ್ಗೆ ಪ್ರಸ್ತಾವನೆ ಕಳುಹಿಸಿದ ತಕ್ಷಣ ಕೊಡುತ್ತೇವೆಂಬ ಆಶ್ವಾಸನೆಯನ್ನು ಇಲ್ಲಿ ಕೊಟ್ಟಿದ್ದರು. ನಾವು ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟರೂ ಸಹಿತ ಅದನ್ನು ಮಂಜುರಾತಿ ಮಾಡದೇ ಪ್ರಸ್ತಾವನೆಯನ್ನು ವಾಪಸ್ಸು ಕಳುಹಿಸಿದ್ದಾರೆ. DTP Model 15 Computer ಗಳಿಗೆ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಇದಕ್ಕೆ ಆದೇಶವನ್ನು ಆದಷ್ಟು ಬೇಗ ಕಳುಹಿಸಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾವು ವೃತ್ತಿ ಶಿಕ್ಷಣ ಕೋರ್ಸ್‌ಗಳನ್ನೇ ಪುನರ್ ಪರಿಶೀಲನೆ ಮಾಡಿ ಇವೆಲ್ಲವನ್ನು up-grade ಮಾಡಬೇಕು, ಇವತ್ತಿನ ಅಗತ್ಯತೆಗೆ ತಕ್ಕಂತೆ ಎಲ್ಲಾ ವಿಜ್ಞಾನ, ತಂತ್ರಜ್ಞಾನದ ಬಳಕೆ ಮಾಡಿಕೊಳ್ಳುವುದಕ್ಕೆ ನಮ್ಮ ಯುವಕರಿಗೆ ಸಾಧ್ಯವಾಗುವಂತೆ ಪುನರ್ ರಚನೆ ಮಾಡಬೇಕೆನ್ನುವ ರೀತಿಯಲ್ಲಿ ಎಲ್ಲಾ ಅಧ್ಯಯನ ನಡೆಯುತ್ತಿವೆ, ಅವಕಾಶಗಳು ನಡೆಯುತ್ತಾ ಇವೆ. ಅದರ ಹಿನ್ನೆಲೆಯಲ್ಲಿ ಮಂಡ್ಯದ ಜೆ.ಓ.ಸಿ. ಕಾಲೇಜನ್ನು ಸಹ ಪುನರ್ ನವೀಕರಿಸಿ ಅಲ್ಲಿ ಅತ್ಯುತ್ತಮವಾದಂಥ ಕೋರ್ಸ್‌ಗಳು ನಡೆಯುವುದಕ್ಕೆ ಬೇಕಾಗಿರುವಂಥ ಕ್ರಮಗಳನ್ನು ತಕ್ಷಣ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಯೋಗೀಶ್‌ಭಟ್ : ಮಾನ್ಯ ಅಧ್ಯಕ್ಷರೆ, ಜೆ.ಓ.ಸಿ. ಕೋರ್ಸ್‌ಗಳಲ್ಲಿ ಹಲವು ವರ್ಷಗಳಿಂದ ದುಡಿಯುತ್ತಿರುವಂಥ ಅಧ್ಯಾಪಕರುಗಳನ್ನು regularize ಮಾಡುವಂಥ ಕ್ರಮವನ್ನು ತಕ್ಷಣ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಪರಿಶೀಲನೆಯಾಗುತ್ತಿದೆ.

ಜಿಲ್ಲಾ ಪಂಚಾಯತ್ ರಸ್ತೆಗಳ ದುರಸ್ಥಿ

35. **ಶ್ರೀ ನಾಯ್ಕ ಜೆ.ಡಿ. (ಭಟ್ಕಳ)**:– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

1. ಭಟ್ಕಳ ವಿಧಾನ ಸಭಾ ವ್ಯಾಪ್ತಿಯ ಗ್ರಾಮೀಣ ಭಾಗದ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು ಮಳೆಗಾಲದಲ್ಲಿ ಪೂರ್ತಿ ಕೆಟ್ಟು ಹೊಂಡಗಳಾಗಿ,